**1 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ  ನಂಃ **75/2023**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಮಲ್ಲಿಕಾರ್ಜುನ | | ಪಿಡಬ್ಲೂ - 07 |
| ತಂದೆಯ ಹೆಸರು | - ಮಲ್ಲಿಕಾರ್ಜುನಪ್ಪ | | ಸಿಡಬ್ಲೂ - 14 |
| ವಯಸ್ಸು | - 57 ವರ್ಷ | | |
| ಉದ್ಯೋಗ | - ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಿ.ಡಬ್ಲ್ಯೂ ಡಿ , ಚಿಕ್ಕಮಗಳೂರು | | |
| ವಾಸ ಸ್ಥಳ | - ಚಿಕ್ಕಮಗಳೂರು | | |

ದಿನಾಂಕಃ 13.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

<u>ಮುಖ್ಯ ವಿಚಾರಣೆ :  ಸರ್ಕಾರಿ ಅಭಿಯೋಜಕರಿಂದಃ</u>

1. ನಾನು 2022 ರಿಂದ ಮಾರ್ಚ್ 2024 ರವರೆಗೆ ಸಹಾಯಕ  ಇಂಜಿನಿಯರ್ ಆಗಿ ಕೊಪ್ಪ ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 20-03-2023 ರಂದು ಎನ್.ಆರ್.ಪುರ ವೃತ್ತ ನಿರೀಕ್ಷಕರು ನಮ್ಮ ಲೋಕೋಪಯೋಗಿ ಇಲಾಖೆಗೆ ಮನವಿಯನ್ನು ಸಲ್ಲಿಸಿ ಬಾಳೆಹೊನ್ನೂರು ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 30/2023 ಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಕೋರಿದ್ದರು.

3. ಸದರಿ ಮನವಿಯು ನಮ್ಮ ಕಛೇರಿಯಲ್ಲಿ ದಿಃ 21-03-2023 ರಂದು ಸ್ವೀಕೃತಗೊಂಡಿರುತ್ತದೆ. ಸದರಿ ಮನವಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಮನವಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.35 ಎಂದು ಗುರುತಿಸಲಾಯಿತು.

4. ಸದರಿ ಮನವಿಯಲ್ಲಿ ಪೊಲೀಸರು ಮೇಲೆ ಹೇಳಿದ ಪ್ರಕರಣದ ಫಿರ್ಯಾದಿಯಾದ ಜಯ ಕೋಂ ರವಿರವರ ಮೊಬೈಲ್ ಸಂಖ್ಯೆಯನ್ನು ನೀಡಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ಅವರು ನಮಗೆ ಕೃತ್ಯ ನಡೆದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದ್ದರು. ಅದರಂತೆ ನಾನು ದಿನಾಂಕಃ 29-04-2023 ರಂದು ಸಿ.ಕೆ.ಗ್ರಾಮದಲ್ಲಿರುವ ಜಯ ಕೋಂ ರವಿರವರ ಮನೆಯ ಮುಂದೆ ಇರುವ ಬಾಳೆಹೊನ್ನೂರು-ಎನ್.ಆರ್.ಪುರ ರಸ್ತೆಯಲ್ಲಿ ಕೃತ್ಯ ನಡೆದ ಸ್ಥಳವನ್ನು ಸದರಿ ಜಯರವರು ನನಗೆ ತೋರಿಸಿದರು. ಅದರಂತೆ ನಾನು ಸದರಿ ಸ್ಥಳದ ನಕ್ಷೆಯನ್ನು ಸ್ಥಳದಲ್ಲಿಯೇ ತಯಾರಿಸಿದೆನು. ಸದರಿ ನಕ್ಷೆಯನ್ನು ನಮ್ಮ ಸಹಾಯಕ ಕಾರ್ಯಪಾಲಕ ಇಂಜಿನಿಯರರವರ ಪರವಾಗಿ ದಿಃ 26-04-2023 ರಂದು

ಪತ್ರದೊಂದಿಗೆ ಎನ್.ಆರ್.ಪುರ ವೃತ್ತ ನಿರೀಕ್ಷಕರವರಿಗೆ ನೀಡಿದ್ದೇನೆ. ಅದನ್ನು ಸದರಿ ಪೊಲೀಸರು ದಿಃ 05-05-2023 ರಂದು ಸ್ವೀಕರಿಸಿರುತ್ತಾರೆ. ಸದರಿ ನಕ್ಷೆ ಮತ್ತು ಪತ್ರವನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ ನಿಪಿ.36 ಮತ್ತು ಪಿ.37 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.36(ಎ) ಮತ್ತು ಪಿ.37(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರಿಂದಃ-</u>

5. ಪೊಲೀಸರು ನಿಪಿ.35 ಮನವಿಯಲ್ಲಿ ತಿಳಿಸಿದ್ದ ಮೇರೆಗೆ ನಾನು ಜಯ ಕೋಂ ರವಿರವರಿಗೆ ಪತ್ರ ವ್ಯವಹಾರ ಮಾಡಿ ಸ್ಥಳವನ್ನು ತೋರಿಸುವಂತೆ ಕೋರಿಲ್ಲ, ಆದರೆ ಫೋನ್ ಮಾಡಿ ತಿಳಿಸಿದ್ದೇನೆ. ನೀವು ನಿಪಿ.36 ರಲ್ಲಿ ತೋರಿಸಿರುವ ಕೃತ್ಯ ನ ಡೆದ ಸ್ಥಳದಿಂದ ಜಯರವರ ಮನೆಗೆ ಎಷ್ಟು ದೂರ ಇತ್ತು ಎಂದು ನೀವು ಅದರಲ್ಲಿ ತೋರಿಸಿಲ್ಲ ಎಂದರೆ ಸರಿ. ಅದೇ ರೀತಿ ನೀವು ನಿಪಿ.36 ರಲ್ಲಿ ತೋರಿಸಿರುವ ವೆಹಿಕಲ್ ಶೆಡ್ ಕೃತ್ಯ ನಡೆದ ಸ್ಥಳಕ್ಕೆ ಎಷ್ಟು ದೂರವಾಗುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನೀವು ಅದರಲ್ಲಿ ತೋರಿಸಿರುವ ಮನೆ ಜಯರವರದ್ದು ಎಂದು ನಮೂದಿಸಲು ನೀವು ಅವರ ಮನೆಯ ದಾಖಲೆಯನ್ನು ಪಡೆದು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

6. ಎನ್.ಆರ್.ಪುರ -ಬಾಳೆಹೊನ್ನೂರು ರಾಜ್ಯ ಹೆದ್ದಾರಿಯಿಂದ 1.5 ಮೀಟರ್ ದೂರದಲ್ಲಿ ಸದರಿ ರಸ್ತೆ ಬದಿಯಲ್ಲಿ ಕೃತ್ಯ ನಡೆದಿತ್ತು. ಅದು ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಸರ್ಕಾರಕ್ಕೆ ಸೇರಿದ್ದು ಎನ್ನುತ್ತಾರೆ. ಅದು ಸರ್ಕಾರಕ್ಕೆ ಸೇರಿತ್ತು ಎಂದು ನಿಪಿ.36 ರಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

7. ನಿಪಿ.36 ರಲ್ಲಿ ತೋರಿಸಿರುವ ಜಯರವರ ಮನೆ ಮತ್ತು ವೆಹಿಕಲ್ ಶೆಡ್ ಗಳ ವಿಸ್ತೀರ್ಣವನ್ನು ಅದರಲ್ಲಿ ನಮೂದು ಮಾಡಿಲ್ಲ. ನಾನು ನಿಪಿ.36 ನಕ್ಷೆಯನ್ನು ಸ್ಥಳದಲ್ಲಿಯೇ ತಯಾರಿಸಿದ್ದೇನೆ. ಅದರ ಪೂರ್ವದಲ್ಲಿ ನಾನು ಆ ಬಗ್ಗೆ ಯಾವುದೇ ಟಿಪ್ಪಣಿಯನ್ನು ಮಾಡಿಕೊಂಡಿಲ್ಲ. ನಿಪಿ.36 ಕ್ಕೆ ನೀವು ಜಯರವರ ಅಥವಾ ಸ್ಥಳೀಯರ ಸಹಿಯನ್ನು ಪಡೆಯಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಸ್ಥಳಕ್ಕೆ ಭೇಟಿ ನೀಡಿದ ಬಾಬ್ತು ಫೋಟೋ ತೆಗೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

8. ನೀವು ದಿಃ 29-04-2023 ರಂದು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಭೇಟಿ ನೀಡಿದ್ದಾಗಿ, ಸ್ಥಳದಲ್ಲಿಯೇ ನೀವು ನಿಪಿ.36 ನಕ್ಷೆಯನ್ನು ತಯಾರಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ಜಯ ಕೋಂ ರವಿರವರು ಯಾವುದೇ ಸ್ಥಳವನ್ನು ತೋರಿಸಿಲ್ಲ ಮತ್ತು ಸ್ಥಳದಲ್ಲಿ ನೀವು ಯಾವುದೇ ನಕ್ಷೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸ್ಥಳಕ್ಕೆ ಭೇಟಿ ನೀಡದೇ ಇದ್ದರೂ ಸಹ ಕಚೇರಿಯಲ್ಲಿಯೇ ಕುಳಿತು ಪೊಲೀಸರಿಗೆ

ಸಹಾಯವಾಗುವಂತೆ ನಿಪಿ.36 ನಕ್ಷೆಯನ್ನು ತಯಾರಿಸಿ ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ